ಈ ಅವಧಿಯಲ್ಲಿ ಯಾವುದೇ ದೋಷ ಉಂಟಾದಲ್ಲಿ ಇದನ್ನು ಸರಿಪಡಿಸಿ ಅಥವಾ ಅಗತ್ಯ ಬಿದ್ದಲ್ಲಿ ಬದಲಾಯಿಸಿಕೊಡುವುದು ಸರಬರಾಜುದಾರರ ಜವಾಬ್ದಾರಿಯಾಗಿರುತ್ತದೆ

ಈ ರೀತಿಯಲ್ಲಿ ಉತ್ತಮ ಗುಣಮಟ್ಟದ ಪಂಪ್‌ಸೆಟ್ ಮತ್ತು ಇತರ ಸಾಮಗ್ರಿಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ

169(235) ಶ್ರೀ ನರಸಿಂಹಸ್ವಾಮಿ ಜೆ(ದೊಡ್ಡಬಳ್ಳಾಪುರ)

ವಿಷಯ ಕೊಳವೆ ಬಾವಿಗಳ ಪಂಪ್‌ಸೆಟ್ ಸಾಮಗ್ರಿಗಳ ಸರಬರಾಜು

ಮಾನ್ಯ ಕಾರ್ಮಿಕ ಕಲ್ಯಾಣ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಅಲ್ಪಸಂಖ್ಯಾತರ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಕೆಯಿಮದ ಮಂಜೂರು ಮಾಡುವ ಕೊಳವೆ ಬಾವಿಗಳಿಗೆ ಸಂಭಂದಿಸದಂತೆ ಪಂಪ್ ಸೆಟ್ಟು ಸಾಮಗ್ರಿಗಳನ್ನು ಕೊಳ್ಳಲು ಸರ್ಕಾರ ಫಲಾನುಭವಿಗಳಿಗೆ ನೇರವಾಗಿ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವುದೇ?

ಆ) ಇತ್ತೀಚೆಗೆ ಇಲಾಖೆಯಿಂದ ಟೆಂಡರ್ ಮೂಲಕ ಒದಗಿಸಿರುವ ಪಂಪುಸೆಟ್ಟುಗಳ ಗುಣಮಟ್ಟ ಸರಿಯಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಸರ್ಕಾರದ ಮುಮದಿನ ನಿಲುವೇನು?

ಶ್ರೀ ಇಕ್ಬಾಲ್ ಅನಸಾರಿ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಹಾಗೂ ಡಿ ದೇವರಾಜು ಅರಸು ಹಿಂದುಳಿದ ವರ್ಗಗಳ ಅಬಿವೃದ್ಧಿ ನಿಗಮದಿಂದ

ಕೊರೆಯಲಾಗಿರುವ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಮತ್ತು ಇತರೆ ಸಾಮಗ್ರಿಗಳನ್ನು ಕೊಳ್ಳಲು ಫಲಾನಿಭವಿಗಳಿಗೆ ನೇರವಾಗಿ ಮಾರ್ಗಸೂಚಿಗಳಂತೆ ಅವಕಾಶ ಇರುವುದಿಲ್ಲ

ಆ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಪಂಪ್‌ಸೆಟ್ ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಿದ್ದು, ಪಂಪ್‌ಸೆಟ್‌ಗಳ ಗುಣಮಟ್ಟ ಹಾಗೂ ನಿರ್ದಿಷ್ಟವಾದ ಗುಣವುಳ್ಳ ಪಂಪ್‌ಸೆಟ್‌ಗಳನ್ನು ಖರೀದಿಸಲು ಟೆಂಡರ್‌ನ್ನು ಕರೆಯಲಾಗುತ್ತದೆ' ಉನ್ನತ ಮಟ್ಟದ ಸಮಿತಿಯಲ್ಲಿ ದರವನ್ನು ನಿಗದಿ ಪಡಿಸಿದಂತೆ ಪಂಪ್‌ಸೆಟ್‌ಗಳನ್ನು ಖರೀದಿಸಲಾಗುತ್ತಿದೆ ಪಂಪ್‌ಸೆಟ್‌ಗಳ ಗುಣಮಟ್ಟದ ಬಗ್ಗೆ ಯಾವುದೇ ಆದ ದೂರುಗಳು ಫಲಾನುಭವಿಗಳಿಂದ ಬಂದಿರುವುದಿಲ್ಲ

ಇ) ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗುಣಮಟ್ಟದ ಬಗ್ಗೆ ಯಾವುದೇ ಆದ ದೂರುಗಳೂ ಫಲಾನುಭವಿಗಳಿಂದ ಬಂದಿರುವುದಿಲ್ಲ

170(387) ಶ್ರೀ ಪದ್ಮನಾಭ ಕೊರಾರಿ (ವಿಟ್ಲ)

ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತ ಕಲ್ಯಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ವರ್ಷದಲ್ಲಿ ರಾಜ್ಯದಲ್ಲಿ ಪತ್ತೆ ಹಚ್ಚಲಾದ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಬಾಲ ಕಾರ್ಮಿಕರ ನಿವಾರನೆಗೆ ಸರಕಾರ ಕೈಗೊಂಡ ಕ್ರಮಗಳೇನು?